ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/48/2016-17. ದಿನಾಂಕ:30-08-2016.

<table>
<tr><th>ವಾದಿಗಳು</th><th>ಪ್ರತಿವಾದಿಗಳು</th></tr>
<tr><td>1)ಮ್ಯಾದಾರ ಕೊಟ್ರೇಶ ತಂದೆ ಎಂ.ಹನುಮಂತಪ್ಪ<br>2)ಮ್ಯಾದಾರ ಅಂಜಿನಪ್ಪ ತಂದೆ ಎಂ.ಹನುಮಂತಪ್ಪ<br>3)ಮ್ಯಾದಾರ ಕೊಟ್ರೇಶ ತಂದೆ ಮ್ಯಾದರ ಕೊಮಾರಪ್ಪ<br>4)ಮ್ಯಾದಾರ ಮೂರ್ತಿ ತಂದೆ ಮ್ಯಾದರ ಕೊಮಾರಪ್ಪ<br>04 ನೇ ವಾರ್ಡ ಎಲ್.ಬಿ. ಬಡಾವಣೆ<br>ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು</td><td>ಮ್ಯಾದಾರ ಬವರಾಜ ತಂದೆ ಮ್ಯಾದರ ಕೊಮಾರಪ್ಪ<br>04 ನೇ ವಾರ್ಡ ಎಲ್.ಬಿ.ಬಡಾವಣೆ<br>ಕೊಟ್ಟೂರು ಪಟ್ಟಣ<br>ಕೂಡ್ಲಿಗಿ ತಾಲೂಕು</td></tr>
<tr><td colspan="2">ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 137/1. 139/9. ವಿಸ್ತೀರ್ಣ 1-53. 2-01. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 137/1. 139/9. ವಿಸ್ತೀರ್ಣ 1-53. 2-01. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಮ್ಯಾದಾರ ಕೊಟ್ರೇಶ ತಂದೆ ಎಂ.ಹನುಮಂತಪ್ಪ. ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಾಂಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 19-08-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಹಾಲಿ ಪಟ್ಟದಾರರಾದ ಮ್ಯಾದರ ಭೀಮಪ್ಪ ತಂದೆ ಮೈಲಾರಪ್ಪ ಇವರ ಮರಣ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಹಾಗೂ ಇವರ ವಾರಸುದಾರರ ಪೈಕಿ ಮ್ಯಾದಾರ ಬಸವರಾಜಪ್ಪ ಇವರು ಸಹಿ ಮಾಡಲು ಹಾಗೂ ಹೇಳಿಕೆ ನೀಡಲು ಗ್ರಾಮದಲ್ಲಿ ಲಭ್ಯವಿರುವುದಿಲ್ಲ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 10/2015-16. ದಿನಾಂಕ 19-09-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 30-08-2016 ರಂದು ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ರಾಂಪುರ ಗ್ರಾಮದ ಸನಂ 137/1. 139/9. ವಿಸ್ತೀರ್ಣ 1-53. 2-01. ಎಕ್ರೆ ಜಮೀನುಗಳ ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಿದೇಯೇಂಬುದು ನಮಗೆ ತಿಳಿಸಿಲ್ಲವೆಂದು ಅರ್ಜಿದಾರರು ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ಯಾವುದೇ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿಲ್ಲವೆಂದು ತಿಳಿಸಿರುವ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಮು.ತಿ.ನೋ:-2

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಾಂಪುರ ಗ್ರಾಮದ ಸನಂ 137/1. 139/9. ವಿಸ್ತೀರ್ಣ 1-53. 2-01. ಎಕ್ರೆ ಜಮೀನುಗಳ ಬಗ್ಗೆ ಅರ್ಜಿದಾರರು ಯಾವ ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಿಲ್ಲವೆಂದು ತಿಳಿಸಿದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 30-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಮ್ಯಾದಾರ ಕೊಟ್ರೇಶ್ ತಂದೆ ಎಂ.ಹನುಮಂತಪ್ಪ ಹಾಗೂ ಇತರರು 04 ನೇ ವಾರ್ಡ ಎಲ್.ಬಿ.ಬಡಾವಣೆ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಮ್ಯಾದಾರ ಬಸವರಾಜ ತಂದೆ ಮ್ಯಾದರ ಕೊಮಾರಪ್ಪ 04 ನೇ ವಾರ್ಡ ಎಲ್.ಬಿ.ಬಡಾವಣೆ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಚೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.